ಉಪಯೋಗಿಸಬೇಕೆಂದು ಹೇಳಿದ್ದಾರೆ. ಆದುದರಿಂದ ಅದನ್ನು ತೀವ್ರವಾಗಿ ಪರಿಶೀಲಿಸಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್‌ನ್ನು ಮುಂದುವರಿಸಿ ಆದಷ್ಟು ಜಾಗ್ರತೆ ಅದನ್ನು ವಶಪಡಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಎಂ. ಎಂ. ನಧಾಫ್,—ಆ ಜಮೀನನ್ನು ಯಾವ ಉದ್ದೇಶಕ್ಕಾಗಿ ಆಕ್ವೈರ್ ಮಾಡಿತ್ತು. ಯಾವಾಗ ಅವಾರ್ಡ್ ಪಾಸ್ ಆಯಿತು? ೨೦ ವರ್ಷವಾದರೂ ಆ ಉದ್ದೇಶ ಈಡೇರದಿರುವುದರಿಂದ ಅದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಬೇಗಾನೆ ರಾಮಯ್ಯ.—ಅದರ ವಿವರಗಳನ್ನು ಕೊಟ್ಟಿದ್ದೇನೆ. ಅದು ನನ್ನ ಉತ್ತರದಲ್ಲಿದೆ.

ಶ್ರೀ ಜಿ.ಕೆ. ತಕ್ಕೇಡ್.—ಯಾವಾಗ ಸ್ವಾಧೀನಕ್ಕೆ ತೆಗೆದುಕೊಂಡರು ಎಂಬುದು ಇಲ್ಲ.

ಶ್ರೀ ಬೇಗಾನೆ ರಾಮಯ್ಯ.—ಗ್ರಾಮ ಪಂಚಾಯಿತಿಯವರು ಸ್ವಾಧೀನಕ್ಕೆ ತೆಗೆದುಕೆ ಇಂಡಿಲ್ಲ.

ಶ್ರೀ ಜಿ.ಕೆ. ತಕ್ಕೇಡ್.—ಆ ಜಮೀನನ್ನು ಯಾರ ಕಡೆಯಿಂದ ತೆಗೆದುಕೊಂಡಿರಿ, ಯಾವಾಗ ಅವಾರ್ಡ್ ಪಾಸ್ ಆಯಿತು ಈ ವಿವರಗಳನ್ನು ಸ್ಪಷ್ಟವಾಗಿ ನೀಡಬೇಕು, ಸುಮ್ಮನೆ ಅಧಿಕಾರಿಗಳು ಬರೆದುಕೊಟ್ಟದನ್ನು ತಾವು ಇಲ್ಲಿ ಓದಬೇಡಿ.

SRI A. LASKSHMISAGAR.—Sir, it is stated that lands were acquired but Panchayats did not take possession. I want to know when acquisition took place and how they were terminated. Why the village panchayat did not take possession of the land. I request the Hon. Minister to furnish all the details in this connection.

ಶ್ರೀ ಬೇಗಾನೆ ರಾಮಯ್ಯ.—ಆ ಜಮೀನನ್ನು ಆಕ್ವೈರ್ ಮಾಡಿರತಕ್ಕವರು ಬೈಲಹೊಂಗಲದ ಅಸಿಸ್ಟೆಂಟ್ ಕಮೀಷನರ್‌ರವರು. ಅವರ ಹತ್ತಿರ ಪೊಸಿಷನ್ ತೆಗೆದುಕೊಳ್ಳಬೇಕೆಂದಾಗ ಸಾಕಷ್ಟು ದಾಖಲಾತಿಗಳು ಪಂಚಾಯಿತಿಗೆ ಸಿಗಲಿಲ್ಲ. ಟ್ರಜರಿಗೆ ಹಣ ಕಟ್ಟಿದ್ದಾರೆ. ದಾಖಲಾತಿಗಳು ಸರ್ಕಾರದಲ್ಲಿವೆ, ಆದರೆ ಅವರು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡಿಲ್ಲ. ಅದು ಎಗಡು ವರ್ಷವಾದರೆ ಲ್ಯಾಪ್ಸ್ ಆಗುತ್ತದೆ. ಆದ್ದರಿಂದ ಪುನ: ಹೊಸ ಪ್ರೊಸೀಡಿಂಗ್ಸ್ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಜಿ. ಕೆ. ತಕ್ಕೇಡ್.—ಪಂಚಾಯಿತಿಯವರು ಎಷ್ಟು ಹಣ ಕಟ್ಟಿದ್ದಾರೆ?

(ಉತ್ತರವಿಲ್ಲ)

SEI M.M. NADAFH.—The object with which the lands were acquired 20 years back has not been served by not giving possession of the same to the village panchayat. May I know the reasons.....

ಶ್ರೀ ಬೇಗಾನೆ ರಾಮಯ್ಯ.—ಇಲ್ಲಿ ನನಗೆ ಬಂದಿರತಕ್ಕ ಮಾಹಿತಿಗಳ ಆಧಾರದ ಮೇಲೆ ಹೇಳಿದ್ದೇನೆ ಹೆಚ್ಚು ವಿವರಣೆಗಳು ಬೇಕಾದರೆ ಈ ಪ್ರಶ್ನೆಯನ್ನು ತಡೆಹಿಡಿಯಬಹುದು.

MR. DEPUTY SPEAKER.— The question is held over.

Facilities to the passengers in the prizate Bue-stand at Mandya

660 SRI M.S. ATMANANDA (Mandya). -Will the Minister for Housing and Urban Development be pleased to state.—

(a) Whether they are aware that the Bus Stand constructed for private buses in Mandya City is in a busy place;

(b) if so, whether they are also aware that due to inadequate facilities, the passengers are put to lot of difficulties

(c) the steps taken by them to overcome such difficulties?

SRI DHARAM SINGH (Minister for Housing and Urban Development).—

(a) Yes.

(b) Owing to inadequate facilities, the passengers may have been put to difficulties and inconveniences. The City Municipal Council, Mandya has spent Rs. 1,06,566 for providing several facilities to the travelling public.

(c) The City Municipal Council, Mandya has provided the necessary facilities in the rural bus stand such as shelter, electric lights, urimals lavatoey and water supply

ಶ್ರೀ ಎಂ.ಎಸ್. ಆತ್ಮಾನಂದ —ಅಧ್ಯಕ್ಷರೇ, ಈ ಖಾಸಗಿ ಬಸ್ ನಿಲ್ದಾಣ ಜನನಿಬಿಡ ಸ್ಥಳದಲ್ಲಿ ಇರುವುದನ್ನು ಸರ್ಕಾರ ಒಪ್ಪಿಕೊಂಡಿದೆ. ಈ ಬಸ್‌ನಿಲ್ದಾಣ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಆಸ್ಪತ್ರೆ ಹಾಗೂ ಶಾಲಾ ಕಾಲೇಜುಗಳ ಸಮೀಪದಲ್ಲಿ ಇದೆ. ಹಾಗೂ ಈ ನಿಲ್ದಾಣದಲ್ಲಿ ಜನ ನಿಲ್ಲುವುದಕ್ಕೆ ಸ್ಥಳ ಇಲ್ಲದೇ ರಸ್ತೆಯಲ್ಲೇ ನಿಂತುಕೊಂಡು ಹೋಗಿಬರುವ ವಾಹನಗಳಿಗೆ ತೊಂದರೆ ಕೊಡುತ್ತಿದ್ದಾರೆ. ಈ ದೃಷ್ಟಿಯಿಂದ ಈ ನಿಲ್ದಾಣವನ್ನು ಬೇರೆ ಕಡೆಗೆ ಸ್ಥಳಾಂತರಿಸಲು ನಗರಸಭೆಗೆ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.–ಮಾನ್ಯ ಸದಸ್ಯರು ಅಲ್ಲಿನ ಜನರಿಗೆ ಆಗುತ್ತಿರತಕ್ಕ ತೊಂದರೆಯ ಬಗ್ಗೆ ಹೇಳುತ್ತಿದ್ದಾರೆ. ಆದರೆ ಈಗಾಗಲೇ ಅಲ್ಲಿನ ಜನರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಬೇಕೆಂದು ೧,೦೬,೫೬೬ ರೂಪಾಯಿ ಖರ್ಚು ಮಾಡಿ ಅಲ್ಲಿ ವಿದ್ಯುತ್ ಮತ್ತು ನೀರಿನ ವ್ಯವಸ್ಥೆ ಮುಂತಾದ ಸೌಕರ್ಯಗಳನ್ನು ಮಾಡಿಕೊಟ್ಟಿದೆ. ಆದರೆ ತಾವು ಅಲ್ಲಿ ಶಾಲೆ ಮತ್ತು ಹೆಲ್ತ್ ಯೂನಿಟ್ ಮಧ್ಯೆ ಈ ನಿಲ್ದಾಣ ಇದೆ ಎಂದು ಹೇಳುತ್ತಿದ್ದೀರಿ. ಈ ಬಗ್ಗೆ ಅಲ್ಲಿನ ನಗರಸಭೆಯವರು ಈ ನಿಲ್ದಾಣವನ್ನು ಬೇರೆ ಕಡೆ ವರ್ಗಾವಣೆ ಮಾಡುವುದು ಅವಶ್ಯಕವೆಂದು ತಿಳಿಸಿದರೆ ಅದನ್ನು ಶಿಫ್ಟ್ ಮಾಡಿಸೋಣ.

ಶ್ರೀ ಎಂ. ಎಸ್. ಆತ್ಮಾನಂದ.—ನಗರಸಭೆಯವರು ನಿರ್ಮಿಸಿರುವ ಬಸ್ ನಿಲ್ದಾಣ ಇದು. ಇದನ್ನು ಮೊದಲು ಕಟ್ಟುವಾಗಲೇ ವಿರೋಧ ಇತ್ತು. ಆದರೂ ಇದನ್ನು ಕಟ್ಟಿದ್ದಾರೆ. ಈ ನಿಲ್ದಾಣಕ್ಕೆ ಒಂದು ಬಸ್ ಹೋದರೆ, ಮತ್ತೊಂದು ಬಸ್ ಒಳಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಎಲ್ಲಾ ಬಸ್‌ಗಳೂ ಸಾಲಿನಲ್ಲಿ ಒಳಕ್ಕೆ ಹೋಗಬೇಕು. ಆದ್ದರಿಂದ ಈ ನಿಲ್ದಾಣವನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವುದು ಸೂಕ್ತವೆಂದು ನಾನು ಹೇಳುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಈ ನಿಲ್ದಾಣವನ್ನು ಶಿಫ್ಟ್ ಮಾಡುವುದಕ್ಕೆ ಆದೇಶ ಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಮುನಿಸಿಪಲ್ ಅಡ್ಮಿನಿಸ್ಟ್ರೇಟರ್ ರವರಿಂದ ವರದಿ ತರಿಸಿಕೊಂಡು ಇದು ಅವಶ್ಯವೆಂದು ತಿಳಿದುಬಂದರೆ ನಿಜವಾಗಿಯೂ ಇದನ್ನು ಕನ್ಸಿಡರ್ ಮಾಡುತ್ತೇನೆ.

Augmentation of Water Supply to Chamarajanagar, Ramasamudra Town

774 SRI M.C. BASAPPA (Chamarajanagar)—Will the Minister for Housing and Urban Development be pleased to state :—

(a) whether an estimate is sanctioned for augmenting water supply to Chamarajanagar, Ramasamudra Town ;

(b) If so, the estimated cost of the work ;